ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ:1 ಡಿಸೆಂಬರ್ 2024 ಸಂಚಿಕೆ:6 ಪುಟಗಳು: 11

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

ವಿಳಾಸ
ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಎಚ್ಚರಿಕೆ ಮಾನವ ಎಚ್ಚರಿಕೆ

"ಹೋಯ್, ಸ್ವಲ್ಪ ನಿಲ್ಲಿ. ನನ್ನ ಮಾತು ಕೇಳಿ. ನನಗೆ ನಿಮ್ಮ ಹತ್ತಿರ ಸ್ವಲ್ಪ ಮಾತನಾಡಬೇಕು. ನಮ್ಮೆಲ್ಲರ ಕಷ್ಟಗಳನ್ನು ಹಂಚಿಕೊಳ್ಳಬೇಕು. ನಿಲ್ಲಿ ಅಂದ್ರೆ ಹೋಗೇ ಬಿಡ್ತೀರಾ? ನಾವು ನಮ್ಮಲ್ಲಿರುವುದನ್ನೆಲ್ಲಾ ನಿಮಗೆ ಕೊಡ್ತೇವೆ. ಆದರೆ ನೀವು ಎಲ್ಲವನ್ನು ಬಳಸಿಕೊಂಡು ಆಮೇಲೆ ನಮ್ಮ ಚಿಂತೆಯನ್ನೇ ಮಾಡುವುದಿಲ್ಲ. ದೇವರು ನಮ್ಮನ್ನೆಲ್ಲಾ ಸೃಷ್ಟಿ ಮಾಡುವಾಗ ನಮಗೆ ನೀವೆಲ್ಲಾ ನಿಮ್ಮ ನಿಮ್ಮ ಸ್ವಾರ್ಥ ನೋಡಿಕೊಳ್ಳಿ ಅಂತ ಹೇಳಿದ್ದಾರಾ? ಒಬ್ಬರು ಇನ್ನೊಬ್ಬರಿಗೆ ಆಧಾರವಾಗಿ ಇರಿ ಅಂತ ನಮ್ಮನ್ನೆಲ್ಲಾ ಈ ಭೂಲೋಕದಲ್ಲಿ ಬಿಟ್ಟಿದ್ದಾರೆ. ಆದರೆ ನೀವು ಅದೇ ದೇವರ ಸುಂದರ ಸೃಷ್ಟಿ, ಬುದ್ಧಿವಂತ ಜೀವಿಗಳೆಂದು (ಅದೂ ನೀವೇ ನಿಮ್ಮನ್ನು ಹೊಗಳಿಕೊಳ್ಳುವುದು) ಜಂಭ ಪಡುವ ಮನುಷ್ಯರೇ, ಸ್ವಲ್ಪ ನನ್ನ ಮಾತು ಕೇಳಿ. ಪ್ರಕೃತಿಯ ಸಮತೋಲನವನ್ನು ಹಾಳು ಮಾಡಬೇಡಿ. ಎಲ್ಲವನ್ನೂ ಒಂದೇ ಸಾರಿಗೆ ತಿಂದು ಬಿಡ್ತೇವೆ. ಒಂದೇ ಸಾರಿಗೆ ಅನುಭವಿಸಿ ಬಿಡ್ತೇವೆಂದರೆ ನಾಳೆಗೆ ಬೇಡವಾ? ನೀವು ಈಗಿರುವವರು ಹೋದ ಮೇಲೆ ನಾಳೆ ಬರುವ ಜನಾಂಗದವರಿಗೆ ಏನೂ ಬೇಡವಾ? ಸ್ವಲ್ಪ ಆಲೋಚನೆ ಮಾಡಿ. ಅವಸರ ಪಡದೆ ನಿಧಾನವಾಗಿ ನನ್ನ ನೆರಳಿನಲ್ಲಿ ಕುಳಿತು ಸುಧಾರಿಸಿಕೊಳ್ಳಿರಿ.

"ಅರೆ! ನಿಮಗೆ ನಾನು ಯಾರು ಅಂತ ಗೊತ್ತಾಗಲಿಲ್ವಾ? ನಾನು, ನೀವು ತುಂಬಾ ಆಸೆಯಿಂದ ತಿಂದು, ತುಂಬಾ ಚೆನ್ನಾಗಿತ್ತು ಈ ರಸಪೂರಿ ಮಾವಿನಹಣ್ಣು ಅಂತ ಮನಸ್ಸು ತುಂಬಿ ಹೇಳ್ತೀರಲ್ಲ, ಆ ರಸಪೂರಿ ಮಾವಿನಹಣ್ಣನ್ನು ಕೊಡುವ ಮರ ಅಂದರೆ ದೊಡ್ಡ ಮಾವಿನ ಮರ. ಮೊದಲು ಪರಿಸ್ಥಿತಿ ಹೀಗೆ ಇರಲಿಲ್ಲ. ನನಗೆ ಇಷ್ಟು ಸಿಟ್ಟು ಕೂಡಾ ಬರ್ತಾ ಇರಲಿಲ್ಲ. ಆಗ ನಾನು ಒಂದು ಸುಂದರವಾದ ತೋಟದಲ್ಲಿ ಇದ್ದೆ. ಪುಟ್ಟ ಗಿಡ ಇರುವಾಗ ಆ ತೋಟದ ಯಜಮಾನರು ದಿನಾ ನೀರು ಹನಿಸಿ ನನ್ನನ್ನು ಸ್ವಂತ ಮಗುವಿನ ಹಾಗೆ ನೋಡಿಕೊಳ್ತಾ ಇದ್ರು. ನಾನೂ ಅಷ್ಟೇ, ಅವರ ಆರೈಕೆಯಲ್ಲಿ ಚೆನ್ನಾಗಿ ಬೆಳೆಯುತ್ತಿದ್ದೆ. ಗಾಳಿ ಬಂದಾಗ ನನ್ನ ಸುಂದರ ಕೈಗಳನ್ನು (ರೆಂಬೆಗಳನ್ನು) ತೂಗಿಕೊಳ್ಳುತ್ತಾ, ದೂರದಲ್ಲಿ ಯಾರೋ ಹಾಡುತ್ತಿರುವ ಹಾಡುಗಳನ್ನು ಕೇಳಿಕೊಳ್ತಾ ಆನಂದ ಪಡುತ್ತಿದ್ದೆ. ನನ್ನ ಯಜಮಾನರು ಹಟ್ಟಿ ಗೊಬ್ಬರ ತಂದು ಹಾಕಿ ನನ್ನ ಆರೈಕೆ ಮಾಡುತ್ತಿದ್ದರು. ಈಗಿನವರ ತರಹ ರಸಗೊಬ್ಬರ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಅಂತ ನನಗೆ ಕಷ್ಟ ಕೊಡುತ್ತಿರಲಿಲ್ಲ.

"ನಾನು ಮೊದಲ ಬಾರಿಗೆ ಹಣ್ಣು ಬಿಟ್ಟಾಗ ನನಗೆ ತುಂಬಾ ಸಂತೋಷವಾಗಿತ್ತು. ಆಗ ನನ್ನ ಮೈತುಂಬಾ ಎಷ್ಟು ದೊಡ್ಡ ಹಣ್ಣುಗಳಿದ್ದವು! ಆ ಹಣ್ಣುಗಳ ಭಾರಕ್ಕೆ ನಾನೆಲ್ಲಿ ಬಿದ್ದು ಹೋಗ್ತೀನೋ ಅಂತ ದಿಗಿಲಾಗ್ತಿತ್ತು. ಆ ಹಣ್ಣುಗಳ ರುಚಿ ಏನು ಹೇಳ್ತೀರಿ? ತೋಟದ ಯಜಮಾನರು ಅವರ ಪರಿವಾರದವರು ಹಣ್ಣುಗಳನ್ನು ಕಿತ್ತು ತಿನ್ನುತ್ತಿರುವಾಗ ಹಣ್ಣಿನ ರುಚಿ ಅವರ ಮುಖಭಾವದಿಂದ ಗೊತ್ತಾಗುತ್ತಿತ್ತು. ನನಗೆ ಆಗ ನನ್ನ ಜನ್ಮ ಸಾರ್ಥಕವಾಯಿತು ಅಂತ ಅನ್ನಿಸುತ್ತಿತ್ತು. ಈ ರೀತಿ ಸಂತೋಷದಿಂದ ಎಷ್ಟು ವರ್ಷ ಬಾಳಿದೆನೋ ಗೊತ್ತಾಗಲಿಲ್ಲ. ಕಾಲನ ನಿಯಮದಂತೆ ತೋಟದ ಯಜಮಾನರು ದೇವರ ಪಾದ ಸೇರಿದರು. ಅವರ ಮಕ್ಕಳ ಕೈಯಲ್ಲಿ ಅಧಿಕಾರ ಬಂತು. ಆ ಮಕ್ಕಳೋ, ಇಡೀ ದೇಹದ ತುಂಬಾ ಸ್ವಾರ್ಥ ತುಂಬಿಕೊಂಡಿರುವವರು. ಅಪ್ಪ ಮಾಡಿಟ್ಟ ಆಸ್ತಿ ಸಾಕಾಗದೆ ಇನ್ನೂ ಬೇಕು, ಮತ್ತೂ ಬೇಕು ಎನ್ನುವ ಜಾತಿಯವರು. ನನ್ನ ಸುತ್ತಮುತ್ತ ದಪ್ಪವಾಗಿದ್ದ ಮರಗಳನ್ನೆಲ್ಲಾ ಕೊಡಲಿಗೆ ಆಹುತಿ ಕೊಟ್ಟರು. ಇದರಿಂದ ಅವರಿಗೆ ತುಂಬಾ ದುಡ್ಡು ಬಂತು. ಆದರೆ ನಾನು ಜೊತೆಗಾರರನ್ನು ಕಳೆದುಕೊಂಡು ಒಂಟಿಯಾಗಿ ನಿಂತೆ. ನನ್ನನ್ನೂ ಕಡಿಯಬೇಕೆಂದು ಅವರವರೊಳಗೆ ಮಾತುಕತೆ ನಡೆಯುತ್ತಿತ್ತು. ಆದರೆ ಇಷ್ಟು ಹಣ್ಣು ಕೊಡುವ ಮರ ಇರಲಿ ಅಂತ ಆಮೇಲೆ ತೀರ್ಮಾನ ಆಯ್ತು. ಆದರೆ ನನಗೆ ಈಗ ಅನ್ನಿಸುತ್ತದೆ, ಅವರು ಆಗಲೇ ನನ್ನನ್ನು ಕಡಿದಿದ್ದರೆ ಚೆನ್ನಾಗಿತ್ತು ಅಂತ. ಈಗ ನಾನು ಇಷ್ಟು ಸಂಕಟ ಪಡುವುದಾದರೂ ತಪ್ಪುತ್ತಿತ್ತು. ನನ್ನ ಸುತ್ತಮುತ್ತ ಆಧುನಿಕ ವ್ಯವಸ್ಥೆಯಿಂದ ತೋಟಗಾರಿಕೆ ಶುರು ಮಾಡಿದರು.

"ಹೊಸ ವಿಧಾನ ತಪ್ಪೆಂದು ನಾನು ಹೇಳುವುದಿಲ್ಲ. ಆದರೆ ಯಾವುದನ್ನೇ ಆದರೂ ಅಳವಡಿಸಿಕೊಳ್ಳುವ ಮೊದಲು ಮುಂದಾಲೋಚನೆ ಮಾಡಬೇಕು. ಅದು ಬಿಟ್ಟು ಅವರು ಮಾಡಿದರು ಇವರು ಮಾಡಿದರು ಅಂತ, ಅದರಲ್ಲೂ ವಿದೇಶೀಯರು ಏನೋ ಮಾಡಿ ಅದು ಬೇಡವೆಂದು ಬಿಸಾಡಿದುದನ್ನು ಪ್ರಸಾದ ಎನ್ನುವ ಹಾಗೆ ತಂದು ನಮ್ಮಲ್ಲಿ ಅಳವಡಿಸುತ್ತೇವಲ್ಲಾ ಅದು ತಪ್ಪು. ಈಗ ನೀವೇ ನೋಡಿ, ನಮ್ಮ ನೆಲ ಮೊದಲು ಹೇಗಿತ್ತು, ಈಗ ಹೇಗಾಗಿದೆ? ಇದಕ್ಕೆ ಯಾರು ಹೊಣೆ? ಅದೇ ನಾನು ಹೇಳುತ್ತಿದ್ದೆನಲ್ಲಾ, ನನ್ನ ಸುತ್ತಮುತ್ತ ಏನೇನೋ ಬೆಳೆದರು. ಸಿಕ್ಕಿಸಿಕ್ಕಿದ ಗೊಬ್ಬರ ತಂದು ಹಾಕಿದರು. ಆಮೇಲೆ ಆ ಹುಳು ಬಿತ್ತು ಈ ಹುಳು ಬಿತ್ತು ಅಂತ ಸಿಕ್ಕಾಬಟ್ಟೆ ಕ್ರಿಮಿನಾಶಕಗಳನ್ನು ತಂದು ಸಿಂಪಡಿಸಿದರು. ಅಯ್ಯೋ, ಕ್ರಿಮಿನಾಶಕಗಳು ಒಂದೊಂದು ಸಾರಿ ನನ್ನ ಮೈಗೂ ಬಂದು ಬೀಳುತ್ತಿತ್ತು. ಆಗ ಬೆಂಕಿ ಬಿದ್ದ ಹಾಗೆ ಆಗುತ್ತಿತ್ತು. ಆಮೇಲೆ ಮೈ ಎಲ್ಲಾ ತುರಿಕೆ ಶುರು ಆಗುತ್ತಿತ್ತು. ನನಗೇನಾದರೂ ಶಿವದೇವರ ತರಹ ಮೂರನೇ ಕಣ್ಣು ಇದ್ದಿದ್ದರೆ ಆ ಕ್ರಿಮಿನಾಶಕವನ್ನು ಕಂಡುಹಿಡಿದವನನ್ನು ಸುಟ್ಟು ಬೂದಿ ಮಾಡುತ್ತಿದ್ದೆ. ಆದರೆ ನನಗೆ ಮೈ ತುಂಬಾ ಕಣ್ಣಿದ್ದುದರಿಂದ ಕಣ್ಣೀರು ಸುರಿಸಿಕೊಂಡು ಸುಮ್ಮನಿದ್ದೆ. ಅಲ್ಲಾ, ಇಷ್ಟೆಲ್ಲಾ ದುಡ್ಡು ಸುರಿದು ಏನೇನೋ ಮಾಡಿದರಲ್ಲ, ಅವರಿಗೆ ಲಾಭ ಏನು ಬಂತು? ಮೊದಮೊದಲು ಲಾಭ ಬಂದ ಹಾಗೆ ಆಯ್ತು. ಆದರೆ ಆಮೇಲೆ ಗೊಬ್ಬರ ಸುರಿದರೂ ಏನೂ ಬೆಳೆಯಲಾರೆ ಎನ್ನುವ ಹಾಗೆ ಭೂಮಿ ಬಂಜರಾಗತೊಡಗಿತು. ಅಯ್ಯೋ, ನಿನ್ನ ಬುದ್ಧಿಗೆ ಇಷ್ಟು ಅಂತ ಬಾಯಿಗೆ ಬಂದ ಹಾಗೆ ಬೈಯಬೇಕು ಅಂತ ಮನಸ್ಸಾಗುತ್ತಿತ್ತು. ಆದರೆ ಈ ಮನುಷ್ಯ ಜಾತಿಗೆ ಅರ್ಥ ಆಗ್ತದಾ? ವಿನಾಶ ಕಾಲೇ ವಿಪರೀತ ಬುದ್ಧಿ ಅಂತ ಕೆಟ್ಟ ಮೇಲೆ ಬುದ್ಧಿ ಬಂದು ಏನು ಪ್ರಯೋಜನ?

"ಈಗ ನೀವೇ ನೋಡಿ, ನಮ್ಮ ತೋಟದ ಪಕ್ಕದಲ್ಲಿ ಒಂದು ಪುಟ್ಟ ಕಾಲುವೆ ಹರೀತಿತ್ತು. ನೀರು ಎಷ್ಟು ಸ್ವಚ್ಛವಾಗಿ ಸ್ಫಟಿಕದ ಹಾಗೆ ಹೊಳೆಯುತ್ತಿತ್ತು. ಅದರ ಮೇಲಿನಿಂದ ಗಾಳಿ ಬೀಸಿ ಬರುವಾಗ ಎಷ್ಟು ತಂಪಾಗುತ್ತಿತ್ತು. ಆದರೆ ಈಗ ಕಾಲುವೆ ಕಡೆಗೆ ನೋಡಲೂ ಭಯ ಆಗ್ತದೆ. ನೀರಿನ ಬಣ್ಣವೋ, ಯಾವುದೆಂದೇ ಹೇಳಲು ಆಗುವುದಿಲ್ಲ. ಊರು ಬೆಳೆದ ಹಾಗೆ ಎಲ್ಲ ಕಡೆಗಳಿಂದ ಕೊಳೆ ನೀರು ಅದರ ಜೊತೆಗೆ ದುಡ್ಡು ಮಾಡುವ ದುರಾಶೆಯವರೆಲ್ಲ ನೀರು ಇರುವ ಕಡೆಯಲ್ಲಿ ಕಾರ್ಖಾನೆಗಳನ್ನೇ ಕಟ್ಟಿಸುತ್ತಾರಲ್ಲ, ಅಲ್ಲಿಂದ ಬರುವ ರಾಸಾಯನಿಕ ತ್ಯಾಜ್ಯಯುಕ್ತ ನೀರು ಎಲ್ಲವೂ ಸೇರಿ ಈಗ ಆ ಕಾಲುವೆ ಗಬ್ಬೆದ್ದು ನಾರ್ತಾ ಇದೆ. ಮೊದಲೆಲ್ಲ ಸುತ್ತಮುತ್ತ ಇರುವ ಜನರಿಗೆ ಆಧಾರವಾಗಿದ್ದ ನೀರು ಈಗ ವಿಷವಾಗಿ ಪರಿಣಮಿಸಿದೆ. ಮೊನ್ನೆ ಆ ಕಾಲುವೆ ತುಂಬಾ ಬಿಳಿಬಿಳಿ ನೊರೆ ತುಂಬಿಕೊಳ್ತು. ನೋಡ್ಲಿಕ್ಕೆ ಬಿಳಿ ಮೋಡದ ಹಾಗೆ ಚಂದ ಇತ್ತು. ಆದರೆ ಒಂದು ಜೋರಾದ ಗಾಳಿಗೆ ಎಲ್ಲಾ ನೊರೆಗಳು ಬಂದು ನಮ್ಮ ತೋಟದಲ್ಲಿ ಮುತ್ತಿಕೊಳ್ತು. ನನ್ನ ರೆಂಬೆ ಎಲೆಗಳ ಮೇಲೆಲ್ಲಾ ಮುತ್ತಿನ ಹಾಗೆ ಬಿಳಿಬಿಳಿ ನೊರೆ. ಆಮೇಲೆ ಶುರುವಾಯ್ತು ನೋಡಿ ಸಂಕಟ! ಹೇಳಲಾರೆ, ಹೇಳದುಳಿಯಲಾರೆ ಅಂತಹ ತುರಿಕೆ, ಉರಿ, ನೋವು. ನನ್ನ ಇಡೀ ದೇಹ ಒದ್ದಾಡಿತ್ತು. ಆ ನೊರೆ ತಾಗಿದ ಜಾಗವೆಲ್ಲಾ ಕಪ್ಪಾಗಿ ಉದುರಿತು. ಈ ಘಟನೆಯ ನಂತರದ ವಿಷಯ ಗೊತ್ತಾ? ಮೊನ್ನೆ ದಿನಪತ್ರಿಕೆಯಲ್ಲಿ ನೊರೆ ಮುಸುಕಿದ ಕಾಲುವೆ ಜೊತೆ ನಮ್ಮ ತೋಟವೂ ಸೇರಿದ ಭಾವಚಿತ್ರ ಬಂದಿತ್ತು. ಜನರೆಲ್ಲ ಈ ಸುದ್ದಿ ಓದಿ ಕಂಗಾಲಾದರು. ಪರಿಣಿತರ ತಂಡ ಬಂತು. ಎಲ್ಲರೂ ಸೇರಿ ನೀರನ್ನು ಪರೀಕ್ಷೆ ಮಾಡಿದರು. ನಮ್ಮ ತೋಟದಲ್ಲಿಯೂ ಅಳಿದುಳಿದ ಗಿಡ, ಬೆಳೆಗಳ ಪರೀಕ್ಷೆ ನಡೆಯಿತು. ಒಬ್ಬೊಬ್ಬರು ಒಂದೊಂದು ಫಲಿತಾಂಶ ಹೇಳಿದರು. ನಿಜ ಏನು ಅಂತ ನಾನು ಹೇಳ್ತೇನೆ ಅಂದರೆ ಒಬ್ಬರೂ ನನ್ನ ಮಾತು ಕೇಳುವುದಿಲ್ಲ. ಹೋಗಿ, ಎಲ್ಲರೂ ಹಾಳಾಗಿ ಹೋಗಿ. ನಾವೆಲ್ಲರೂ ಜೊತೆಜೊತೆಯಾಗಿ ಚೆನ್ನಾಗಿ ಬಾಳೋಣ ಅಂದರೆ ಕೇಳ್ತೀರಾ? ಇಲ್ಲ, ನಾವೇ ಬುದ್ಧಿವಂತರು, ಈ ಭೂಮಿಯಲ್ಲಿ ಇರುವುದೆಲ್ಲ ನಮ್ಮದು ಅಂತ ಹಿಂದೆ ಮುಂದೆ ನೋಡದೆ ಪ್ರಕೃತಿಯನ್ನು ಹಾಳು ಮಾಡ್ತೀರಿ. ಈಗ ಅನುಭವಿಸಿ. ಮಳೆಯಿಲ್ಲ, ನೀರಿಲ್ಲ, ಆ ರೋಗ ಈ ರೋಗ ಅಂತ ಕಷ್ಟ ಬಂದಾಗ ದೇವರೇ ನಮಗೆ ಕಷ್ಟ ಯಾಕೆ ಕೊಡ್ತೀರಿ. ನಿಮಗೆ ಕರುಣೆ ಇಲ್ಲವೇ? ಅಂತ ದೇವರನ್ನೇ ದೂಷಿಸುತ್ತೀರಿ. ನನ್ನ ಮಾತು ಕೇಳಿ, ಇನ್ನಾದರೂ ಎಚ್ಚತ್ತುಕೊಳ್ಳಿ. ನಿಮ್ಮ ಮುಂದಿನ ಪೀಳಿಗೆಗೆ ಒಂದು ಸ್ವಚ್ಛ ಸುಂದರ ಪೃಥ್ವಿಯನ್ನು ಬಳುವಳಿಯಾಗಿ ಕೊಡುವ ಪ್ರಯತ್ನ ಮಾಡಿ. ದಯವಿಟ್ಟು ನನ್ನ ಮಾತು ಕೇಳಿ ಅಂತ ನಾನು ಕೂಗಿಕೊಳ್ಳುತ್ತಿದ್ದೆ.

"ಆದರೆ ಆ ಕೂಗು ಯಾರ ಕಿವಿಗೆ ಬೀಳ್ತದೆ ಹೇಳಿ. ಕೂಗಿ ಕೂಗಿ ಸುಮ್ಮನಾದ ನನ್ನ ಹತ್ತಿರ ಕೊಡಲಿ ಹಿಡಿದು ಇಬ್ಬರು ಬಂದರು. ಅವರ ಹಿಂದೆ ಸ್ವಾರ್ಥದ ಮೂಟೆಯಂತಿರೋ ಮಕ್ಕಳು ನಿಂತಿದ್ದರು. ಅವರ ಮಾತು ನನಗೆ ಕೇಳುತ್ತಿತ್ತು. ಈ ಮರ ಏನೂ ಪ್ರಯೋಜನ ಇಲ್ಲ. ಈಗಲೇ ಕಡಿದರೆ ಸ್ವಲ್ಪ ದುಡ್ಡು ಬರಬಹುದು. ಬೇಗ ಕಡಿಯಿರಿ ಅಂತ ಆ ಮೂಟೆಗಳು ಹೇಳುತ್ತಿದ್ದಂತೆ ಕೊಡಲಿ ಏಟು ನನ್ನ ಕಾಲುಗಳಿಗೆ ಬೀಳತೊಡಗಿತು. ಹೌದು, ಇತ್ತೀಚಿನ ವರ್ಷಗಳಲ್ಲಿ ನಾನು ಹಣ್ಣುಗಳನ್ನು ಕೊಡಲು ಅಸಮರ್ಥನಾಗಿದ್ದೇನೆ. ಅದಕ್ಕೆ ಕಾರಣ ಯಾರು ಹೇಳಿ? ಇಲ್ಲಿಗೆ ನನ್ನ ಕೆಲಸ ಮುಗಿಯಿತು."

ಮಾತು ಮುಗಿಯಿತು. ಮಾವಿನ ಮರ ನೆಲಕ್ಕುರುಳಿತು.



ಪ್ರೇಮನಾರಾಯಣ
ವಿಶ್ವಪ್ರಿಯನಗರ, ಬೇಗೂರು
ಬೆಂಗಳೂರು

# ಸಂಪಾದಕ ವಾಣಿ



## ನಾರಾಯಣ ಶೆಟ್ಟಿಗಾರ್

07.07.2024ರಂದು ಶ್ರೀ ಸತ್ಯನಾರಾಯಣ ಸ್ವಾಮಿಯ ಅನುಗ್ರಹದೊಂದಿಗೆ ಬೆಳಕು ಕಂಡ ನಿಮ್ಮ "ಶೆಟ್ಟಿಗಾರ ವಾಣಿ" ಪತ್ರಿಕೆ ತಿಂಗಳಿನಿಂದ ತಿಂಗಳಿಗೆ ಹೊಸ ಹೆಜ್ಜೆಯನ್ನಿಡುತ್ತಾ ಜನಮನ್ನಣೆ ಗಳಿಸುತ್ತಿದೆ. ನವಂಬರ್ 2024ರ ನಮ್ಮ 5ನೆಯ ಸಂಚಿಕೆ 27.10.2024ರಂದು ನಡೆದ ನಮ್ಮ ಕೂಟದ ಸರ್ವ ಸದಸ್ಯರ ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಿಂದ ಬಿಡುಗಡೆ ಹೊಂದಿತು. ಇದು ನಮ್ಮ ಆರನೆಯ ಸಂಚಿಕೆ.

ಹೊಸ ಹೊಸ ಪ್ರತಿಭೆಗಳಿಂದ ಲೇಖನಗಳು ಬರುತ್ತಿರುವುದು ನಿಜಕ್ಕೂ ಸಂತೋಷ ತರುವ ವಿಷಯ. ಇದೊಂದು ಒಳ್ಳೆಯ ಬೆಳವಣಿಗೆ. ಈ ಬೆಳವಣಿಗೆ ಪತ್ರಿಕೆಯ ಉದ್ದೇಶವನ್ನು ಸಾರ್ಥಕಗೊಳಿಸುತ್ತದೆ. ಈ ಒಂದು ಪ್ರಕ್ರಿಯೆ ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ವೇಗವನ್ನು ಪಡೆದುಕೊಳ್ಳಲಿ ಎನ್ನುವುದು ನಮ್ಮ ಆಶಯ.

ನಮ್ಮ ಲೇಖಕರ ಬರವಣಿಗೆಗಳು ಉತ್ತಮ ಗುಣಮಟ್ಟ ಹೊಂದಿವೆ ಎನ್ನುವುದು ಹೆಮ್ಮೆಯ ವಿಷಯ. ಪತ್ರಿಕೆಯ ವಿನ್ಯಾಸಕಾರರ ಪರಿಶ್ರಮ ಶ್ಲಾಘನಾರ್ಹ ಮತ್ತು ಔಚಿತ್ಯಪೂರ್ಣ ತಂತ್ರಜ್ಞಾನ ನೆರವು ಉತ್ತೇಜನಕಾರಿ. ಬಹುಶಃ ನಮ್ಮ ಸಮಾಜದ ಪ್ರತಿಭೆಗಳ ಮಹಾಪೂರಕ್ಕೆ ಕೊರತೆಯೇ ಇಲ್ಲ. ಆದ್ದರಿಂದ ಹೊಸ ಭರವಸೆಗಳೊಂದಿಗೆ ಮುಂದಡಿಯಿಡೋಣ.

# ವಾಚಕರವಾಣಿ

ಶೆಟ್ಟಿಗಾರ ವಾಣಿ ಎಂಬ ಈ ಪತ್ರಿಕೆ ಮಾಸದಿಂದ ಮಾಸಕ್ಕೆ ಮಾಗುತ್ತಾ, ಬೀಗುತ್ತಾ ಎತ್ತೆರೆತ್ತರಕ್ಕೇರುತ್ತಿದೆ. ಅಂದದ ಡಿಸೈನ್, ಚಂದದ ಚಿತ್ರಗಳು, ವಿಭಿನ್ನವಾದ ಬರಹಗಳು, ಎಲ್ಲವೂ ಸೊಗಸಾಗಿದೆ. ಇದು ನಮ್ಮ ಪತ್ರಿಕೆಯೆಂದು ಬೆಂದಕಾಳೂರಿನ ಶೆಟ್ಟಿಗಾರರು ಹೆಮ್ಮೆಯಿಂದ ಹೇಳುವಂದದಲಿ ಪತ್ರಿಕೆ ಮೂಡಿ ಬರುತ್ತಿದೆ. ಇದಕ್ಕೆ ಕಾರಣೀಭೂತರಾದ ಮುಖ್ಯ ಸಂಪಾದಕರಿಗೆ, ಅವರಿಗೆ ಹೆಗಲಾಗಿರುವ ಸಂಪಾದಕ ಮಂಡಳಿಗೆ, ವಿನ್ಯಾಸ & ತಂತ್ರಜ್ಞಾನ ನೆರವು ನೀಡಿದವರಿಗೆ ಹಾಗೂ ನಮ್ಮ ಸಂಘಕ್ಕೆ ಅಭಿನಂದನೆಗಳು ಹಾಗೂ ಅಭಿವಂದನೆಗಳು.

**ರಮೇಶ್ ಶೆಟ್ಟಿಗಾರ್**
**ಮಂಜೇಶ್ವರ**

ನೀರಿಗೆ ಹಾಕಿದ ಉಪ್ಪು' ಸಾಮಾಜಿಕ ಮೌಲ್ಯವುಳ್ಳ ಅತ್ಯುತ್ತಮ ಲೇಖನ. ಉದ್ದಾಲಕರು ತನ್ನ ಮಗನಲ್ಲಿ ಬದಲಾವಣೆ ತರಲು ನೀಡಿದ ನಿದರ್ಶನಗಳು ಇಂದಿನವರಿಗೆ ಮಾದರಿ. ದೀಪಾವಳಿ ಕವನದ ಭಾವ ಸುಂದರ. ಒಂದು ಔಟ್ ಹೌಸ್ ಕಥೆ, ಇತರ ಲೇಖನಗಳು ಇಷ್ಟವಾದವು. ಬಾಲಕ ಅರ್ಜುನ ಕೊಂಚಾಡಿ ಇವರ ವರ್ಣ ಚಿತ್ರಗಳು, ಡಾ. ಶಿವಪ್ರಸಾದ್ ಇವರ ಪುಟ್ಟ ಪದ್ಯಗಳು ಮುದ ನೀಡಿದವು.

'ಶೆಟ್ಟಿಗಾರ್ ವಾಣಿ' ಇನ್ನಷ್ಟು ಯಶಸ್ಸು ಪಡೆಯಲಿ ಮುಂದಿನ ದಿನಗಳಲ್ಲಿ.

**ಶೋಭಾ ಹರಿಪ್ರಸಾದ**
**ಉಡುಪಿ**

# ಆಗುಂಬೆಯ ಭೂತ


AI generated image: No photo credits required

ಒಂದು ಕೆಲಸದ ನಿಮಿತ್ತ ಬೆಂಗಳೂರಿನಿಂದ ಬೆಳಿಗ್ಗೆ ಬಸ್ಸಿನ ಮೂಲಕ ಊರಿಗೆ ಹೊರಟೆ. ಆಗ ಮಳೆಗಾಲ, ಮಳೆ ಧೋ... ಎಂದು ಒಂದೇ ಸಮನೆ ಸುರಿಯುತ್ತಿತ್ತು.

ಬಸ್ಸು ಆಗುಂಬೆಗೆ ಬರುವಾಗ ಸಂಜೆ ಏಳು ಗಂಟೆ. ವಿಪರೀತ ಮಳೆಗೆ, ಆಗುಂಬೆಯ ಘಾಟಿಯಲ್ಲಿ ಒಂದು ದೊಡ್ಡ ಮರ ರಸ್ತೆಯ ಮೇಲೆ ಬಿದ್ದು, ರಸ್ತೆ ಬಂದಾಗಿತ್ತು. ಬಂದ ವಾಹನಗಳು ರಸ್ತೆಯಲ್ಲಿಯೇ ಜಮಾಯಿಸಿದ್ದವು.

ನಾನು ನಿರ್ವಾಹಕನಲ್ಲಿ ಕೇಳಿದೆ: "ರಸ್ತೆ ತೆರವು ಆದ ನಂತರ ಕುಂದಾಪುರ ತಲುಪಲು ಎಷ್ಟು ಗಂಟೆ ಬೇಕಾಗುತ್ತೆ?"

"ನೋಡಿ ಸರ್. .. ಬಸ್ಸು ಹೆಬ್ರಿ -ಹಾಲಾಡಿ -ಕೋಟೇಶ್ವರ ಮಾರ್ಗವಾಗಿ ಕುಂದಾಪುರ ತಲುಪಲು ಕನಿಷ್ಠ ಒಂದೂವರೆ ಗಂಟೆ ಬೇಕು" ಎಂದಾಗ, ನಾನು ನನ್ನ ಸೀಟಿನಲ್ಲಿ ಒರಗಿ ಹಾಗೇ ನಿದ್ದೆಗೆ ಜಾರಿದೆ.

ಗಾಢವಾದ ನಿದ್ದೆಯಲ್ಲಿ ಇರುವಾಗ, ಒಬ್ಬಳು ಯುವತಿ ನನ್ನ ಎದೆಯ ಮೇಲೆ ಕೈ ಇಟ್ಟು, "ಏಳಿ ಸರ್, ರಸ್ತೆ ತೆರವು ಆಯ್ತು" ಎಂದಾಗ ಕಣ್ತೆರೆದು ನೋಡಿದೆ. ಬಳಿಯಲ್ಲಿ ಯಾರೂ ಇರಲಿಲ್ಲ. ಎಲ್ಲರೂ ತಮ್ಮ ಸೀಟಿನಲ್ಲಿ ಒರಗಿ ನಿದ್ರಿಸುತ್ತಿದ್ದರು. ನಿದ್ದೆಗಣ್ಣು ಎಂದು ಕಣ್ಣುಜ್ಜಿಕೊಂಡು, ಸಮಯ ನೋಡಿದೆ. ಹನ್ನೊಂದು ಗಂಟೆ.

ಆಗ ತಾನೆ ಬಸ್ ಹೊರಡಲು ಪ್ರಾರಂಭಿಸಿತ್ತು.

ಇನ್ನೇನು ಕೋಟೇಶ್ವರಕ್ಕೆ ಆರು ಕಿಲೋಮೀಟರ್ ಇರುವಾಗ, ನನ್ನ ನಿಲ್ದಾಣ ಬಂತು. ನಾನು ಬಸ್ಸಿನಿಂದ ಇಳಿದೆ. ಅಮಾವಾಸ್ಯೆಯ ಕತ್ತಲು. ಪೇಟೆ ನಿಶ್ಶಬ್ದವಾಗಿತ್ತು, ಒಂದು ನರಪಿಳ್ಳೆಯೂ ಇಲ್ಲ. ಹಾಗೆ ನನ್ನ ಮೊಬೈಲ್ ನೋಡಿದೆ.

ಸಮಯ ಹನ್ನೆರಡೂವರೆ. ಮೊಬೈಲ್ ಸಿಗ್ನಲ್ ಕೂಡ ಇಲ್ಲ. ಮಳೆ ಸುರಿಯುತ್ತಿತ್ತು. ಮನೆ ಸೇರಲು ಸರಾಸರಿ ಒಂದು ಕಿಲೋಮೀಟರ್ ನಡೆಯಬೇಕು.

ಏನೇ ಆಗಲಿ ಎಂದು ಧೈರ್ಯ ಮಾಡಿ, ಕೊಡೆ ಹಿಡಿದುಕೊಂಡು ಮೊಬೈಲ್ ಬೆಳಕಿನಲ್ಲಿ ನಡೆದೇ ಬಿಟ್ಟೆ.

ಇನ್ನೇನು ಮನೆ ಸೇರಲು ಅರ್ಧ ಕಿಲೋಮೀಟರ್ ದೂರ. ಸುತ್ತಲೂ ಹಾಡಿ. ಮಳೆ ಹನಿ ಮರದ ಎಲೆಗಳ ಮೇಲೆ ಪಟ ಪಟ ಬೀಳುತ್ತಿತ್ತು. ಕತ್ತಲಲ್ಲಿ ಜೀರುಂಡೆಗಳ ಕೂಗು. ಭಯದ ವಾತಾವರಣ. ನನ್ನಿಂದ ಹತ್ತು ಅಡಿ ದೂರ, ಮರದ ಕೆಳಗೆ ಒಬ್ಬಳು ಸುಂದರವಾದ ಯುವತಿ ಮಳೆಯಲ್ಲಿ ನಿಂತಿದ್ದಳು. ನನ್ನ ಹತ್ತಿರ ಹತ್ತಿರ ಬರತೊಡಗಿದಳು.

ನನ್ನ ಎದೆ ಬಡಿತ ಹೆಚ್ಚಾಯಿತು. ಕೈಕಾಲು ನಡುಗತೊಡಗಿತು. ಆದರೂ ಧೈರ್ಯದಿಂದ ನಿಂತೆ.

"ಸರ್.. ಈ ಮಳೆಯಲ್ಲಿ ಎಲ್ಲಿ ಹೋಗ್ತೀರಿ. ಇಲ್ಲೇ ನನ್ನ ಮನೆ ಇದೆ. ಮನೆಯಲ್ಲಿ ಯಾರೂ ಇಲ್ಲ. ನೀವು ಬನ್ನಿ ನನ್ನ ಜೊತೆ" ಎಂದು ಆ ಯುವತಿ ಹೇಳಿದಾಗ, ನನಗೆ "ಇದು ಹೆಣ್ಣಲ್ಲ, ಇದೊಂದು ಮಾಯಾವಿ. ಆಗುಂಬೆಯಲ್ಲಿ ನಿದ್ದೆಯಲ್ಲಿದ್ದಾಗ ನನ್ನ ಎದೆಯ ಮೇಲೆ ಕೈ ಇಟ್ಟ ಯುವತಿ ಇವಳೇ. ಇದಕ್ಕೆ ಮಂತ್ರ ಶಕ್ತಿಯೇ ಮೇಲು" ಎಂದು ನನ್ನ ಕಾಲು ಬೆರಳುಗಳ ನಡುವಿನಿಂದ ರಸ್ತೆಯ ಮೇಲಿನ ಒಂದು ಕಲ್ಲನ್ನು ಕೈಗೆ ತೆಗೆದುಕೊಂಡು ಮೂರು ಬಾರಿ ಒಂದು ಮಂತ್ರವನ್ನು ಜಪಿಸಿ, ಆ ಯುವತಿಯ ಮೇಲೆ ಎಸೆದೆ. ಆಗ ಅದು ಚೀರಿಕೊಂಡು ಕುಸಿದು ಬಿದ್ದು ಅಲ್ಲಿಂದ ಮಾಯವಾಯ್ತು.

ನಾನು ಧೈರ್ಯದಿಂದ ಮನೆ ಸೇರಿದೆ.



ಜಗದೀಶರಾಂ ಶೆಟ್ಟಿಗಾರ್
ಜಪ್ತಿ
ಕುಂದಾಪುರ

# ಬದುಕು

ನಮಗೆಲ್ಲರಿಗೂ ತಿಳಿದಿರುವಂತೆ ಬದುಕಿನ ಬಗ್ಗೆ ಒಬ್ಬೊಬ್ಬರ ಚಿಂತನೆ ಒಂದೊಂದು ರೀತಿಯಾಗಿರುತ್ತದೆ. ಒಬ್ಬ ತನ್ನ ಬದುಕಿನ ರೀತಿ ಅವನ ಎಣಿಕೆಯಂತಿರಬೇಕು ಎಂದು ಯೋಚಿಸಿದರೆ ಇನ್ನು ಕೆಲವರು ತಮ್ಮ ಜೀವನ ಶೈಲಿ ಹೀಗೆಯೇ ಇರಬೇಕು ಅನ್ನುವ ಕಟ್ಟುನಿಟ್ಟಿನ ಸೂತ್ರವನ್ನು ತಾವಾಗಿಯೇ ಅಳವಡಿಸಿಕೊಂಡಿರುತ್ತಾರೆ. ಇನ್ನು ಹಲವರು ಯಾವನೋ ಒಬ್ಬ ವಿಶೇಷ ವ್ಯಕ್ತಿಯ ಜೀವನವನ್ನು ಗಮನಿಸಿ ಅವನಿಂದ ಪ್ರಭಾವಿತರಾಗಿ ಅದೇ ರೀತಿಯ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಮುಂದಾಗುತ್ತಾರೆ. ಉದಾಹರಣೆಗೆ ಈ ಮಂದಿ ತಮ್ಮ ಜೀವನ ಸ್ವಾಮಿ ವಿವೇಕಾನಂದರಂತಿರಬೇಕು ಇಲ್ಲವೇ ರಾಮಕೃಷ್ಣ ಪರಮಹಂಸರಂತಿರಬೇಕು ಎಂದು ಹಂಬಲಿಸುತ್ತಾರೆ. ಹೀಗೆ ಹತ್ತು ಹಲವು ನಿರ್ಣಯಗಳೊಂದಿಗೆ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಒಟ್ಟಿನಲ್ಲಿ ಜೀವನ ಶೈಲಿ ಹಾಗೂ ಉದ್ದೇಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಹಲವು ಮಂದಿ ಸಮಯ ಸಂದರ್ಭಗಳಿಂದ ಪ್ರಭಾವಿತರಾಗುತ್ತಾರೆ. ಅದೇನೇ ಆದರೂ ಒಂದು ನಿರ್ದಿಷ್ಟ ಗುರಿ ಹಾಗೂ ಉದ್ದೇಶವಿಲ್ಲದೇ ಬದುಕುವ ಜೀವನ ಅಸಾಧ್ಯ ಹಾಗೂ ದುರದೃಷ್ಟಕರ.



ಮಾಧವ ಶೆಟ್ಟಿಗಾರ್ ಯು
ವಿಜಯನಗರ ಪೈಪ್ ಲೈನ್
ಬೆಂಗಳೂರು

# ದೈನಂದಿನ ಜೀವನದಲ್ಲಿ ಬದಲಾವಣೆ: Artificial Intelligence (AI) ಪ್ರಭಾವ ಪವಿತ್ರ ಸ್ನೇಹ



AI generated image: No photo credits required

ಮನುಷ್ಯನ ಜೀವನದಲ್ಲಿ ಬದಲಾವಣೆ ನಿರಂತರ. ಇಂದಿನ ದಿನಗಳಲ್ಲಿ ಈ ಬದಲಾವಣೆ ಶರ ವೇಗದಲ್ಲಿ ಸಾಗುತ್ತಿದೆ. ಈ ಬದಲಾವಣೆಯ ಹಾದಿಯಲ್ಲಿ ನಾವು ಬಹಳಷ್ಟು ಸುಧಾರಣೆಗಳನ್ನು ಗಮನಿಸುತ್ತಿದ್ದೇವೆ, ಅದರಲ್ಲೂ ಕೃತಕ ಬುದ್ಧಿಮತ್ತೆ (Artificial Intelligence) ಅಥವಾ ಎಐ (AI) ನಮ್ಮ ಜೀವನದ ಪ್ರತಿಯೊಂದು ಅಂಗವನ್ನು ಸ್ಪರ್ಶಿಸುತ್ತಿದೆ. ನಮಗರಿವಿಲ್ಲದೆಯೇ ಈ ಕೃತಕ ಬುದ್ಧಿಮತ್ತೆ ನಮ್ಮ ನಿತ್ಯ ಜೀವನದ ಒಂದು ಅವಿಭಾಜ್ಯ ಭಾಗವಾಗಿದೆ. ವಿಶೇಷವಾಗಿ ಬೆಂಗಳೂರು ಆಸುಪಾಸಿನ ಜನರು, ತಾವು ಪ್ರತಿದಿನ AI ಬಳಸುತ್ತಿರುವ ಬಗ್ಗೆ ತಿಳಿಯದೆಯೇ ತಾವು ಇದರಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಇದು AI ಹೇಗೆ ನಮ್ಮ ಜೀವನದ ಭಾಗವಾಗಿದೆ, ನಮ್ಮ ಜನರು ಏನನ್ನು ಬಳಸುತ್ತಿದ್ದಾರೆ, ನಾವೆಲ್ಲ AI ಬಳಕೆಯಿಂದ ಹೇಗೆ ಲಾಭ ಪಡೆಯಬಹುದು ಮತ್ತು ಎಚ್ಚರಿಕೆಯ ಅಂಶಗಳೇನು ಎಂಬುದರ ಬಗ್ಗೆ ಒಂದು ಚರ್ಚೆ ಈ ಲೇಖನದ ಪ್ರಯೋಗ.

**AI ಮತ್ತು ದಿನನಿತ್ಯದ ಬಳಕೆಗಳು**

ಕೃತಕ ಬುದ್ಧಿಮತ್ತೆ ಎಂದರೆ ಯಂತ್ರಗಳು ತೋರಿಸುವ ಬುದ್ಧಿಮತ್ತೆ. ಇದು ಮಾನವ ವರ್ತನೆ ಅಥವಾ ಚಿಂತನೆಗೆ ಅನುಕರಣೆಯಾಗಿ, ಸಮಸ್ಯೆಗಳನ್ನು ಪರಿಹರಿಸಲು ತರಬೇತಿ ನೀಡಲಾಗುತ್ತದೆ. AIಯು Machine Learning ಮತ್ತು Deep Learning ತಂತ್ರಜ್ಞಾನದ ಸಂಯೋಜನೆಯಾಗಿದೆ.

ಕೃತಕ ಬುದ್ಧಿಮತ್ತೆಯನ್ನು ಈಗ ತಾನೇ ಜನಿಸಿದ ಒಂದು ನವಜಾತ ಶಿಶುವಿಗೆ ಹೋಲಿಸಬಹುದು. ಆರಂಭದಲ್ಲಿ ಏನೂ ತಿಳಿಯದೆ, ಅನುಭವದಿಂದ ಮತ್ತು ಪರಿಸರದಿಂದ ಕಲಿಯುತ್ತಾ ಹೋಗುತ್ತದೆ. ಆದರೆ, AI ಮಾನವರಿಗಿಂತ ಶೀಘ್ರವಾಗಿ ಕಲಿಯುತ್ತದೆ, ಅಪಾರ Dataವನ್ನು ಸಂಸ್ಕರಿಸಿ ಅದರ ಫಲಿತಾಂಶಗಳನ್ನು ಸುಧಾರಿಸುತ್ತಾ ಹೋಗುತ್ತದೆ. ಪ್ರತಿಯೊಂದು ಸಂಭಾಷಣೆಯಿಂದಲೂ AI ಹೆಚ್ಚು ಪರಿಣಾಮಕಾರಿಯಾಗಿ ರೂಪಾಂತರಗೊಳ್ಳುತ್ತಾ, Data ಸಮೃದ್ಧವಾಗುತ್ತಿದ್ದಂತೆ ಉತ್ತಮಗೊಳ್ಳುತ್ತದೆ. ಈ ವೇಗದ ಕಲಿಕೆ AIಯ ಶಕ್ತಿಯನ್ನು ತೋರಿಸುತ್ತದೆ. ಕೃತಕ ಬುದ್ಧಿಮತ್ತೆ ಮಾದರಿಗಳನ್ನು ವ್ಯಾಪಕ ಪ್ರಮಾಣದ ಮಾಹಿತಿಯನ್ನು ಬಳಸಿಕೊಂಡು ತರಬೇತಿ ನೀಡಲಾಗುತ್ತದೆ ಮತ್ತು ಅವು ಬುದ್ಧಿವಂತ ನಿರ್ಧಾರಗಳನ್ನು ಕೈಗೊಳ್ಳಲು ಸಾಮರ್ಥ್ಯ ಹೊಂದಿರುತ್ತವೆ.

ನಮ್ಮ ದಿನನಿತ್ಯದ ಜೀವನದಲ್ಲಿ AI ಹೇಗೆ ಬಳಸಲ್ಪಡುತ್ತಿದೆ ಎಂಬುದನ್ನು ನೋಡುವುದಾದರೆ

1. Smartphone ಬಳಸುವಾಗ: ನಾವು ದಿನನಿತ್ಯದಲ್ಲಿ ಬಳಸುವ ಎಲ್ಲ Smartphoneಗಳಲ್ಲಿ ಈಗಾಗಲೇ AI ಕಾರ್ಯನಿರ್ವಹಿಸುತ್ತಿದೆ. ಉದಾಹರಣೆಗೆ, ನಾವು ಕ್ಯಾಮೆರಾ ಬಳಸಿ ಫೋಟೋ ಕ್ಲಿಕ್ಕಿಸಿದಾಗ, ಫೋಟೋ ಹಚ್ಚಿಹಾಕುವ ಮುನ್ನವೇ ಅದು Optimise ಮಾಡುತ್ತದೆ. ಇದಲ್ಲದೆ, Google Assistant ಮತ್ತು Siri ಮುಂತಾದ ಧ್ವನಿ ಆಧಾರಿತ ಸಹಾಯಕರಿಂದ ನಾವು ಮಾತಾಡಿ ಮಾಹಿತಿಯನ್ನು ಹುಡುಕಬಹುದು.

2. Digital ಪಾವತಿಗಳು: ಇಂದಿನ ದಿನಗಳಲ್ಲಿ, PhonePe, GooglePe, PayTM ಮುಂತಾದ Digital ಪಾವತಿಗಳು ಜನರಿಗೆ ಜೀವನದ ಒಂದು ಅಂಗ. ಇವುಗಳಲ್ಲಿ AI ಬಳಕೆಯಾಗಿರುವುದು ಅತ್ಯಂತ ಸಾಮಾನ್ಯವಾದ ಸಂಗತಿಯಾಗಿದೆ. ಈ Platformಗಳು ನಮ್ಮ ಖರೀದಿಗಳ ವಲಯವನ್ನು ವಿಶ್ಲೇಷಣೆ ಮಾಡುವ ಮೂಲಕ ನಮಗೆ ಸೂಕ್ತವಾದ ವ್ಯವಹಾರಗಳು ಅಥವಾ ಆಫರ್‌ಗಳನ್ನು ಸೂಚಿಸುತ್ತವೆ. ಈ ರೀತಿಯ ಸೇವೆಗಳು ಕೇವಲ ಸುಲಭ ಪೇಮೆಂಟ್ ಮಾತ್ರವಲ್ಲ, ಅವು ವಂಚನೆಯನ್ನು ತಡೆಗಟ್ಟಲು, ಭದ್ರತೆಯನ್ನು ಹೆಚ್ಚಿಸಲು AI ಬಳಸುತ್ತವೆ.

3. Online ಖರೀದಿ ಮತ್ತು ಗ್ರಾಹಕ ಇಚ್ಛೆಗೆ ಅನುಸಾರಿತ ಶಿಫಾರಸ್ಸುಗಳು: ನೀವು Flipkart ಅಥವಾ Amazonನಲ್ಲಿ ಆನ್‌ಲೈನ್ ಶಾಪಿಂಗ್ ಮಾಡುತ್ತಿದ್ದಾಗ, ನೀವು ಗಮನಿಸಿದ್ದಿರಬಹುದು. ನೀವು ಕೇವಲ ಒಂದು ಉತ್ಪನ್ನವನ್ನು ಹುಡುಕಿದರೆ, ಅದಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಉತ್ಪನ್ನ ಶಿಫಾರಸ್ಸುಗಳು ಬರುತ್ತವೆ. ಈ ಶಿಫಾರಸ್ಸುಗಳು AI ಆಧಾರಿತ ಆಗಿರುತ್ತವೆ. ಪ್ರತಿ ಗ್ರಾಹಕರ ಆಯ್ಕೆಗಳನ್ನು ವಿಶ್ಲೇಷಣೆ ಮಾಡಿ, ನೀವು ಇಷ್ಟಪಡುವ ಉತ್ಪನ್ನಗಳನ್ನು ನಿಮಗೆ ತೋರಿಸುತ್ತವೆ.

4. ಮೆಡಿಕಲ್ ಮತ್ತು ಆರೋಗ್ಯ ಸೇವೆಯಲ್ಲಿ AI: ಆರೋಗ್ಯ ಕ್ಷೇತ್ರದಲ್ಲಿ ಕೂಡ AI ಪ್ರಭಾವ ಅತಿಹೆಚ್ಚು. ಆಸ್ಪತ್ರೆಗಳಲ್ಲಿ, AI ಆಧಾರಿತ softwareಗಳು ಆರೋಗ್ಯ ವಿಮರ್ಶೆಗಳು, ಮತ್ತು ರೋಗ ಚಿಕಿತ್ಸೆಗಳಲ್ಲಿ ಬಳಸಲ್ಪಡುತ್ತಿವೆ. ಉನ್ನತ ತಜ್ಞ ಆಸ್ಪತ್ರೆ ಗಳಲ್ಲಿ ಶಸ್ತ್ರಚಿಕಿತ್ಸೆಗೆ AI ತಂತ್ರಜ್ಞಾನವನ್ನು ಬಳಸಿದ ಅನೇಕ ಉದಾಹರಣೆಗಳಿವೆ.

5. ಟ್ರಾಫಿಕ್ ನಿರ್ವಹಣೆ ಮತ್ತು ಸುರಕ್ಷತೆ: ಬೆಂಗಳೂರು ಮತ್ತು ಮೈಸೂರು ಸೇರಿದಂತೆ ಕರ್ನಾಟಕದ ನಗರಗಳಲ್ಲಿ ಟ್ರಾಫಿಕ್ ಸಮಸ್ಯೆ ಎಲ್ಲರಿಗೂ ಪರಿಚಿತ. ಆದರೆ, AI ಆಧಾರಿತ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆಗಳು ಈಗ ಪರಿಸ್ಥಿತಿಯನ್ನು ಸುಧಾರಿಸುತ್ತಿವೆ. ಟ್ರಾಫಿಕ್ ಕ್ಯಾಮೆರಾಗಳನ್ನು ಬಳಸಿ ನಿಯಂತ್ರಣ ಮಾಡುವುದು ಮತ್ತು ರಸ್ತೆ ಸುರಕ್ಷತೆಯನ್ನು ಹೆಚ್ಚಿಸಲು ಅನೇಕ AI ಸಾಧನಗಳು ಸಹಕಾರಿಯಾಗಿವೆ.

6. ಶಿಕ್ಷಣ ಕ್ಷೇತ್ರದಲ್ಲಿ AI: ನಮ್ಮ ಮಕ್ಕಳ ಶಿಕ್ಷಣದಲ್ಲಿಯೂ AI ಭಾಗವಾಗಿದೆ. ಶಾಲೆಗಳು ಮತ್ತು ಕಾಲೇಜುಗಳು "Smart Class" ಆಧಾರಿತ ಶಿಕ್ಷಣದತ್ತ ಮುಂದಾಗಿವೆ. ಇಲ್ಲಿ AI ಆಧಾರಿತ Softwareಗಳು ಮತ್ತು ಪಾಠ-ಸಾಮಗ್ರಿಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿವೆ. ಇದಲ್ಲದೆ, Online Learning Platformಗಳಲ್ಲಿ AI ಬಳಸಿ ವಿದ್ಯಾರ್ಥಿಗಳಿಗೆ ವಿಶಿಷ್ಟವಾದ ಕಲಿಕೆ ಅನುಭವವನ್ನು ಒದಗಿಸುತ್ತಿವೆ.

7. ಕೃಷಿ ಮತ್ತು AI ಬಳಕೆ: ಕೃಷಿ ಕ್ಷೇತ್ರದಲ್ಲಿ ಕೂಡ AI ನಿರ್ಣಾಯಕ ಪಾತ್ರವಹಿಸಿದೆ. ರೈತರು AI ಬಳಸಿ ಹವಾಮಾನ ಮುನ್ಸೂಚನೆ, ಬೆಳೆ ಇಳುವರಿ ನಿರೀಕ್ಷೆ ಮತ್ತು ಮಣ್ಣು ಪರೀಕ್ಷೆಗಳನ್ನು ಸಮರ್ಪಕವಾಗಿ ಮಾಡಲು ಪ್ರಾರಂಭಿಸಿದ್ದಾರೆ. ಇದರಿಂದ ಅವರು ಅವರ ಬೆಳೆ ಹಾನಿಯನ್ನು ತಡೆಯುವ ಮತ್ತು ಹೆಚ್ಚು ಇಳುವರಿಯನ್ನು ಪಡೆಯಲು ನೆರವಾಗಬಹುದು.

**AI ಬಳಕೆಯ ಎಚ್ಚರಿಕೆಯ ಅಂಶಗಳು**

1. ಮಾಹಿತಿ ಗೌಪ್ಯತೆ: AI ಆಧಾರಿತ Appಗಳು ಮತ್ತು ಸೇವೆಗಳಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವಾಗ ಎಚ್ಚರಿಕೆಯಿಂದಿರಿ. ನೀವು ಬಳಸುವ ವೇದಿಕೆಗಳಿಗೆ ಸ್ಪಷ್ಟ ಗೌಪ್ಯತಾ ನೀತಿಗಳು ಇರುವುದನ್ನು ಮತ್ತು ನಿಮ್ಮ ಮಾಹಿತಿಯನ್ನು ನಿಮ್ಮ ಅನುಮತಿಯಿಲ್ಲದೆ ದುರುಪಯೋಗ ಮಾಡದಿರುವುದನ್ನು ಖಚಿತಪಡಿಸಿಕೊಳ್ಳಿ.

2. ತಪ್ಪಾದ ಮಾಹಿತಿ ಮತ್ತು ಪಕ್ಷಪಾತ: AI ವ್ಯವಸ್ಥೆಗಳು ಕೆಲವೊಮ್ಮೆ ಪಕ್ಷಪಾತದ ಅಥವಾ ತಪ್ಪಾದ ಮಾಹಿತಿಯನ್ನು ಹರಡಬಹುದು. AI ಸಾಧನಗಳು ಒದಗಿಸುವ ಸುದ್ದಿಗಳು ಅಥವಾ ಶಿಫಾರಸುಗಳನ್ನು ಬಳಸಿದಾಗ, ವಿಶ್ವಾಸಾರ್ಹ ಮೂಲಗಳಿಂದ ಮಾಹಿತಿ ಪರಿಶೀಲಿಸಬೇಕು.

3. ಸೈಬರ್ ಸುರಕ್ಷತೆ ಅಪಾಯಗಳು: AI ಚಲಾಯಿತ ವ್ಯವಸ್ಥೆಗಳು ಸೈಬರ್ ದಾಳಿಗಳಿಗೆ ಒಳಪಡುವ ಸಾಧ್ಯತೆ ಇದೆ. ನಿಮ್ಮ ಸಾಧನಗಳು ಮತ್ತು ಸಾಫ್ಟ್‌ವೇರ್ ಅನ್ನು ನಿಯಮಿತವಾಗಿ ನವೀಕರಿಸಿಕೊಳ್ಳಿ ಮತ್ತು ಬ್ಯಾಂಕಿಂಗ್ ಅಥವಾ ವೈಯಕ್ತಿಕ ನಿರ್ವಹಣಾ Appಗಳನ್ನು ಬಳಸುವಾಗ ಭದ್ರತೆ ಇಲ್ಲದ ಜಾಲಗಳನ್ನು ಬಳಸುವುದನ್ನು ತಪ್ಪಿಸಿ.

4. AI ಮೇಲೆ ಅತಿಯಾದ ಭರವಸೆ ಇಡುವುದು: AI ವ್ಯವಸ್ಥೆಗಳು ನಿರ್ಧಾರಗಳನ್ನು ಕೈಗೊಳ್ಳಲು ಸಹಾಯ ಮಾಡುವುದಾದರೂ, ಅವುಗಳ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಬೇಡಿ. ಆರೋಗ್ಯ, ಆರ್ಥಿಕ ಯೋಜನೆ, ಮತ್ತು ಶಿಕ್ಷಣದಂತಹ ಪ್ರಮುಖ ಕ್ಷೇತ್ರಗಳಲ್ಲಿ ಮಾನವೀಯ ತೀರ್ಮಾನಗಳು ಮತ್ತು ವಿಮರ್ಶಾತ್ಮಕ ಚಿಂತನೆಗಳು ಇನ್ನೂ ಅಗತ್ಯವಾಗಿವೆ.

5. AI ಮಾಧ್ಯಮದ ಮಾರ್ಪಾಟು: AI ತಂತ್ರಜ್ಞಾನವನ್ನು ಬಳಸಿಕೊಂಡು ಚಿತ್ರಗಳು, ವೀಡಿಯೊಗಳು ಮತ್ತು ಧ್ವನಿಗಳನ್ನು ಸುಲಭವಾಗಿ ಮಾರ್ಪಡಿಸಬಹುದಾಗಿದೆ. ಇದರಿಂದ ನಿಜವಾದ ಮತ್ತು ನಕಲಿ ವಿಷಯಗಳನ್ನು ತಾರತಮ್ಯ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ, ವೈಯಕ್ತಿಕ ಗುರುತಿನ ಪರಿಶೀಲನೆ ಮತ್ತು ಭದ್ರತೆ ಎಂಬಂತಹ ಸೂಕ್ಷ್ಮ ಸಂದರ್ಭಗಳಲ್ಲಿ ಮಾಧ್ಯಮದ ಪ್ರಾಮಾಣಿಕತೆಯನ್ನು ಸದಾ ಪರಿಶೀಲಿಸುವುದು ಅಗತ್ಯ.

6. ಭಾರತದಲ್ಲಿ AI ನಿಯಂತ್ರಣ ಕಾನೂನುಗಳ ಕೊರತೆ: ಭಾರತದಲ್ಲೀಗ ಕೃತಕ ಬುದ್ಧಿಮತ್ತೆಯನ್ನು ನೇರವಾಗಿ ನಿಯಂತ್ರಿಸುವ ವಿಶೇಷ ಕಾನೂನುಗಳು ಲಭ್ಯವಿಲ್ಲ. ಆದರೆ, AI ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಕೆಲ ಮಾರ್ಗಸೂಚಿಗಳು ಮತ್ತು ಉಪಕ್ರಮಗಳು ರೂಪಿಸಲಾಗಿದೆ. RBI, MeitY, ಮತ್ತು NITI ಆಯೋಗವು AI ಬಳಕೆಗಾಗಿ ಮಾರ್ಗದರ್ಶನ ಮತ್ತು ಯೋಜನೆಗಳನ್ನು ನೀಡುತ್ತಿವೆ.

ಕೃತಕ ಬುದ್ಧಿಮತ್ತೆ ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಪಾದಾರ್ಪಣೆ ಮಾಡುತ್ತಿದೆ. ನಮ್ಮ ದಿನನಿತ್ಯದ ಜೀವನದು ಪ್ರತಿಯೊಂದು ಅಂಶದಲ್ಲೂ AIನ ಅನುಭವ ನಮಗಾಗುತ್ತಿದೆ. Online Shoppingನಿಂದ ಆರೋಗ್ಯ ಸೇವೆಗಳಿಗೆ, ಶಿಕ್ಷಣದಿಂದ ಕೃಷಿ ಸೇವೆಗಳಿಗೆ, AI ಎಲ್ಲರಿಗೂ ಅನುಕೂಲವಾಗುತ್ತಿದೆ. ನಾವು ಇದನ್ನು ಮನಗೊಳ್ಳಬೇಕು, ಅದನ್ನು ಸ್ವೀಕರಿಸಬೇಕು, ಮತ್ತು ಮತ್ತಷ್ಟು ಈ ಕ್ಷೇತ್ರದಲ್ಲಿ ಆವಿಷ್ಕಾರಗಳನ್ನು ನೋಡಬೇಕಾಗಿದೆ.

ಕೃತಕ ಬುದ್ಧಿಮತ್ತೆ ಅಂದರೆ ಕೇವಲ ಭವಿಷ್ಯದ ತಂತ್ರಜ್ಞಾನ ಅಲ್ಲ, ಅದು ಈಗಾಗಲೇ ನಮ್ಮೊಂದಿಗೆ ಇದೆ. ನಾವು ಇದನ್ನು ಅರ್ಥಮಾಡಿಕೊಂಡು, ಇದರ ಸಂಪೂರ್ಣ ಪ್ರಯೋಜನ ಪಡೆಯಲು ಸಜ್ಜಾಗಬೇಕು.



ಸಿ.ಎ. ವಿಶ್ರಾಂತ್ ಬಿ.ಎಲ್
ಬೆಂಗಳೂರು

# ವೇದ ಸುಳ್ಳಾದರೂ ಗಾದೆ ಸುಳ್ಳಾಗದು

1. ಆನೆ ಕದ್ದರೂ ಕಳ್ಳ; ಅಡಕೆ ಕದ್ದರೂ ಕಳ್ಳ.
2. ಆಡಿ ತಪ್ಪಬಾರದು; ಓಡಿ ಸಿಕ್ಕಬಾರದು.
3. ಅಪ್ಪನ ಕಾಲಕ್ಕೆ ಅರಮನೆ, ಮಗನ ಕಾಲಕ್ಕೆ ಬರೀ ಮನೆ.
4. ಅತಿ ಆದರೆ ಅಮೃತವೂ ವಿಷ. ಮಿತಿ ಅರಿತು ಬಳಸಿದರೆ ವಿಷವೂ ಅಮೃತ.
5. ಅರಮನೆ ಇದ್ದರೂ ನೆರೆಮನೆ ಬೇಕು.
6. ಅಕ್ಕಿ ಮೇಲೆ ಆಸೆ; ನೆಂಟರ ಮೇಲೆ ಪ್ರೀತಿ.
7. ಮೇಲೇರಿದವ ಕೆಳಗಿಳಿಯಲೇ ಬೇಕು.
8. ಮನೆಯನ್ನು ಚೆನ್ನಾಗಿ ಇಟ್ಟುಕೋ. ಅದು ನಿನ್ನನ್ನು ಚೆನ್ನಾಗಿ ಇಟ್ಟುಕೊಳ್ಳುತ್ತದೆ.
9. ಮಾತು ಬಲ್ಲವ ಮಾಣಿಕ್ಯ ತಂದ; ಮಾತನರಿಯದವ ಜಗಳ ತಂದ.
10. ಮುಗ್ಗಿ ಬಲ್ಲವನು ತರಗತಿಯಲ್ಲಿ ತಗ್ಗಿ ನಡೆಯಲಾರ.
11. ಮಳೆಗಾಲದ ಬಿಸಿಲನ್ನೂ, ನಗೆಗಾರನ ಮಾತನ್ನೂ ನಂಬಬಾರದು.
12. ಮನೆ ಮುರಿದರೆ ಕಟ್ಟಬಹುದು; ಮನ ಮುರಿದರೆ ಕಟ್ಟಲಾಗದು.
13. ಮುಳ್ಳು ಇಲ್ಲದೆ ಗುಲಾಬಿ ಇಲ್ಲ; ನೋವು ಇಲ್ಲದೆ ಪ್ರೀತಿ ಇಲ್ಲ.
14. ಬಟ್ಟಲಿನಲ್ಲಿರುವ ಹಾಲನ್ನು ಬದಿಯಿಂದಲೇ ಕುಡಿಯಬೇಕು.
15. ಬಾಯಿಯಿಂದ ಹೊರಬಿದ್ದ ಮಾತು, ಬಿಲ್ಲಿನಿಂದ ಹೊರಟ ಬಾಣ ಹಿಂದಿರುಗದು.
16. ಬಗ್ಗಿದವನಿಗೆ ಗುದ್ದು ಜಾಸ್ತಿ.
17. ಬದುಕಿನಲ್ಲಿ ನೆನಪುಗಳಿರಬೇಕು; ನೆನಪಿನಲ್ಲಿ ಬದುಕು ಇರಬಾರದು.
18. ಭೂಮಿಯ ಒಡಲಲ್ಲಿ ನೀರಿರುವಂತೆ ಗುರುವಿನಲ್ಲಿ ಜ್ಞಾನ ಅಡಗಿರುತ್ತದೆ.
19. ಒಲ್ಲದ ಮನಸ್ಸಿಗೆ ಬೆಣ್ಣೆಯಲ್ಲಿ ಕಲ್ಲು.
20. ಒಳ್ಳೆಯದನ್ನು ಎದುರು ನೋಡು; ಕೆಟ್ಟದ್ದನ್ನು ಎದುರಿಸಲು ಸಿದ್ಧನಾಗು.
21. ವಿದ್ಯೆ ಕಡಿಮೆಯಾದರೂ ನಡತೆ ಶುದ್ಧವಾಗಿರಬೇಕು.
22. ಜನಕ್ಕಂಜದಿದ್ದರೂ ಮನಕ್ಕಂಜು.
23. ವಚನ ಕೇಳುವುದರಿಂದ ಆಹಾರ ಪಚನವಾಗದು.
24. ಓದಿದವನಿಗೆ ಒಂದೇ ಕೆಲಸ; ಓದದವನಿಗೆ ಎಲ್ಲಾ ಕೆಲಸ.
25. ಹಣವಿದ್ದರೆ ಜೀವನ ಎಲ್ಲ; ಹಣ ಇಲ್ಲದಿದ್ದರೆ ಜೀವನ ಇಲ್ಲ.



ಚಂದ್ರಶೇಖರ ಶೆಟ್ಟಿಗಾರ್ ಪಿ.
ಆರ್.ಟಿ. ನಗರ,
ಬೆಂಗಳೂರು






ಯತೀಶ್ ಎಲ್. ಶೆಟ್ಟಿಗಾರ್, ಸಿದ್ಧಕಟ್ಟೆ,
ವಿದ್ಯಾರಣ್ಯಪುರ, ಬೆಂಗಳೂರು

# ಕನ್ನಡ ನಾಡು - ಭಾವೈಕ್ಯತೆಯ ಸಮಾಗಮ

ಬಲು ಪರಿಮಳ ಇಹುದು ಈ ಕನ್ನಡ ನುಡಿಯ ಸೆಲೆ;
ಬಲು ಸುಲಲಿತವಾಗಿಹುದು ಈ ಕನ್ನಡ ನಾಡು ಪಥವು;
ವಿಶ್ವ ಪಥದ ಗಾಂಭೀರ್ಯದಲ್ಲಿ; ಭಾರತಾಂಬೆಯ ರಥದಲ್ಲಿ;
'ಕನ್ನಡ ನಾಡು-ನುಡಿ' ಗರ್ಭ ಗುಡಿಯ ಚಾಕರಿಯು,
ಆಗಿರುವುದು ಎಮಗೆ ಪರಮ ಸೌಭಾಗ್ಯದ ಸಿರಿಯು.

ಮೈಸೂರ ರಾಜ ವೈಭವ ಸಿರಿ ರಸಪಾಕದಂತಿರೆ;
ಸೊಬಗ ಮಲ್ಲಿಗೆಯು ತನ್ನ ಜಾಡು ಮರೆತು, ಮೈಸೂರು ಮಲ್ಲಿಗೆಯಾಗಿ;
ಪಸರಿಸಿದೆ ಕಂಪ ಎಲ್ಲೆಲ್ಲೂ, ಭಟ್ಕಳವನ್ನೂ ಬಿಡದೆ !

ಮೀನಗಂಧ ಕಡಲ ಮೊರೆತ ಸ್ವಚ್ಛ ಕನ್ನಡದ ಜಾಣ ಮಂಗಳೂರಾಗಿ;
ಒಡಲಾಳದ ಹಸಿವೆಗೆ ತವಕಿಸುವ ಬಸವಳಿದ ಬೆಂದ ಕರುನಾಡ ಬಡ ರಾಯಚೂರಾಗಿ;
ಐತಿಹಾಸಿಕ ಖಾರದ ಕಟು ತೀಕ್ಷ್ಣ ಇತಿಹಾಸವ ಕಟ್ಟಿಕೊಡುವ ಬಿಜಾಪುರವೂ;
ಗಡಿನಾಡ ಬಾಂಧವ್ಯ ಕುಂದದಿರಲಿ ಎಂಬ ಅಂಬೋಣದ ಸವಿ ಕುಂದದ ಬೆಳಗಾವಿಯಾಗಿ;
ಕನ್ನಡ ವರಕವಿ ಸಂತ ಯೋಗಿ, ಕಲಾವಿದರ ಬೀಡ ಸುಳಿವು,
ಧಾರವಾಡ ಸವಿ ಪೇಡಾದೊಳ ಹಂಚಿ ತಿಳುಹುವುದು;
ಬಳ್ಳಾರಿಯ ಬಳುಕು ಹಾದಿ ಉಕ್ಕುನೆಲೆ ಹೊಸಪೇಟೆಯವರೆಗೂ
ಭವ್ಯ ಐತಿಹಾಸಿಕ ಮರುಕ ತುಂಗೆಯ ಕಣ್ಣೀರ ಹಾದಿ ಹಂಪಿಯಲಿ
ಕಣ್ಣೊರಸಿ ಸಾಂತ್ವನಗೊಳುವುದು!
ವಿಶ್ವ ನಕ್ಷೆಯಲಿ ಅಚ್ಚಳಿಯದೆ ಭೋರ್ಗರೆದು ಹರಿದಾಡುವ
ಶಿವಮೊಗ್ಗದ ಸಿರಿ ಶರಾವತಿಯ ಜೋಗ;
ಗುಡ್ಡ - ಬೆಟ್ಟ ಫಸಲ ಸಿರಿಯ, ಶಿಸ್ತ ಸೊಬಗ ನಿಶ್ಚಲ -
ವೀರ ಯೋಧರ ಗಾಂಭೀರ್ಯವೇ ಮೈ ಮರೆತು ಮಲೆನಾಡು -
ಕೊಡಗು ಇತಿಹಾಸ;
ಜಾತಿ - ನೀತಿಯ ತಾರತಮ್ಯವ ಮರೆತು,
ಗಡಿ-ಎಲ್ಲೆಯ ಭೇದವನ್ನೂ ಅಳಿದು;
ನಾವಾಗುವೆವು ಇಲ್ಲೇ ಅಲ್ಲಿ-ಇಲ್ಲಿ ಬಾಂಧವ್ಯವನ್ನು ಬೆಸೆಯುವ -
ಕನ್ನಡಾಂಬೆಯ ಕೈಂಕರ್ಯ ಹೇತುವಾಗಿ .....



ಎಕ್ಕಾರ್ ಡಿ. ಪಿ. ಶೆಟ್ಟಿಗಾರ್
ಶೇಷಾದ್ರಿಪುರಂ,
ಬೆಂಗಳೂರು



# ಹಚ್ಚೋಣ ದೀಪ

ದೀಪವನು ಹಚ್ಚೋಣ ದೀಪವನು ಹಚ್ಚೋಣ
ದೀಪದಿಂದಲಿ ದೀಪ ಹಚ್ಚೋಣವೇ |
ಕೋಪವನು ತಾಪವನು ಕಿತ್ತೆಸೆದು ದೂರಕ್ಕೆ
ದೀಪದಿಂದಲಿ ದೀಪ ಹಚ್ಚೋಣವೇ ||

ದಣಿವು ಆರಿಸೊ ದೀಪ ಮುನಿಸು ಕಳೆಯುವ ದೀಪ
ಮನವ ಅರಳಿಸೊ ದೀಪ ಹಚ್ಚೋಣವೇ ಬನ್ನಿ |
ಕನಸು ಕಾಣುವ ದೀಪ ವಿನಯ ತುಂಬಿದ ದೀಪ
ಜನರ ಪ್ರೀತಿಸೊ ದೀಪ ಹಚ್ಚೋಣವೇ ||

ಸುರರ ಲೋಕದ ದೀಪ ನರರ ಕಾಯುವ ದೀಪ
ಅರಿವು ನೀಡುವ ದೀಪ ಹಚ್ಚೋಣವೇ |
ಗುರಿಯ ತೋರುವ ದೀಪ ಕೆರಳಿ ನಿಲ್ಲದ ದೀಪ
ಅರಿಯ ತಿದ್ದುವ ದೀಪ ಹಚ್ಚೋಣವೇ ||

ಅನ್ನ ನೀಡುವ ದೀಪ ನನ್ನಿ ಮೆರೆಸುವ ದೀಪ
ಹೊನ್ನಿನಂದದ ದೀಪ ಹಚ್ಚೋಣವೇ |
ಬಣ್ಣ ಬಣ್ಣದ ದೀಪ ಕಣ್ಣಿಗಂದದ ದೀಪ
ಚಿಣ್ಣರೊಲುಮೆಯ ದೀಪ ಹಚ್ಚೋಣವೇ ||

ರವಿಯು ಕೊಟ್ಟಿಹ ದೀಪ ಬುವಿಯು ಮೆಚ್ಚುವ ದೀಪ
ಕವಿಯ ನಲಿಸುವ ದೀಪ ಹಚ್ಚೋಣವೇ |
ಬೆವರ ಹರಿಸುವ ದೀಪ ಬವಣೆ ಕಳೆಯುವ ದೀಪ
ಹವಳದಂದದ ದೀಪ ಹಚ್ಚೋಣವೇ ||

ಬೆಚ್ಚಗಿನ ನಿಲಯದೊಳು ಸ್ವಚ್ಛ ನಿಲುವಿನ ದೀಪ
ಹಚ್ಚ ಹಸಿರಿನ ದೀಪ  ಹಚ್ಚೋಣವೇ |
ಇಚ್ಛೆಯರಿಯುವ ದೀಪ ಕೆಚ್ಚೆದೆಯ ಚೆಲು ದೀಪ
ಎಚ್ಚರಿಸೊ ದೀಪಗಳ ಹಚ್ಚೋಣವೇ ||



ಶೋಭಾ ಹರಿಪ್ರಸಾದ
ಶೆಟ್ಟಿಗಾರ
ಉಡುಪಿ






ಸುರಭಿ ಶೆಟ್ಟಿಗಾರ್
೭ನೇ ತರಗತಿ,
ಶ್ರೀ ಶ್ರೀ ರವಿಶಂಕರ್ ವಿದ್ಯಾಮಂದಿರ,
ವಿದ್ಯಾರಣ್ಯಪುರ, ಬೆಂಗಳೂರು



# ಉ.ದ.ಯ

ಮೂವರು ಸ್ನೇಹಿತರು ಉಮೇಶ, ದರ್ಶಿತ್, ಮತ್ತು ಯಾದವ ಬಾಲ್ಯದಿಂದಲೂ ಒಟ್ಟಿಗೆ ಓದುತ್ತಿದ್ದವರು, ಆಟವಾಡುತ್ತಿದ್ದವರು. ತಮ್ಮ ಜೀವನವನ್ನು ಬೆಳೆಸಿಕೊಳ್ಳುವುದರಲ್ಲಿ ತೀವ್ರ ಉತ್ಸಾಹ ಹೊಂದಿದವರು.

ಕಾಲೇಜು ಮುಗಿದ ಮೇಲೆ, ಉಮೇಶ ಎಂಜಿನಿಯರಿಂಗ್ ಡಿಗ್ರಿ ಪಡೆದು ಕಿರು ಉದ್ಯೋಗ ಹುಡುಕಲು ಶುರುಮಾಡಿದ. ದರ್ಶಿತ್ ವಾಣಿಜ್ಯದಲ್ಲಿ ಚಾತುರ್ಯವನ್ನು ಬೆಳಸಲು ಬಿ.ಕಾಂ ಮುಗಿಸಿ ತನ್ನ ಕುಟುಂಬದ ಮಿತ್ರನ ಸಹಾಯದಿಂದ ಬ್ಯಾಂಕಿಂಗ್ ಉದ್ಯೋಗಕ್ಕಾಗಿ ಅಪ್ಲೈ ಮಾಡಿದ. ಯಾದವ, ಕಿರು ಹಳ್ಳಿಯ ದಾರಿದ್ರ್ಯದ ಮನೆತನದಿಂದ ಬಂದವನು, ಸರ್ಕಾರಿ ಹುದ್ದೆಗೆ ತಯಾರಿ ನಡೆಸಲು ಒಳ್ಳೆಯ ಕೋಚಿಂಗ್ ಸೆಂಟರ್ ನಲ್ಲಿ ಸೇರಲು ಕಷ್ಟಪಟ್ಟು ಹಣ ಒಗ್ಗೂಡಿಸಿದ.

ಹೀಗೆ, ಒಂದೇ ಸಮಯದಲ್ಲಿ, ತಮ್ಮ ತಮ್ಮ ಹಾದಿಗಳನ್ನು ನಿರ್ದಿಷ್ಟಗೊಳಿಸಲು ಪ್ರಯತ್ನಿಸುತ್ತಿದ್ದಾಗ, ದರ್ಶಿತ್ ತಾನೇ ಎಷ್ಟು ಭಾಗ್ಯಶಾಲಿಯೆಂದು ಅಂದುಕೊಂಡನು. ಕುಟುಂಬದ ಸ್ನೇಹಿತನ ಸಹಾಯದಿಂದ, ಅವನಿಗೆ ಬ್ಯಾಂಕಿನಲ್ಲಿ ಕ್ಲರ್ಕ್ ಹುದ್ದೆ ಸಿಕ್ಕಿತು. ಆದರೆ, ಈ ಬಗ್ಗೆಯಾದ ಸಂತೋಷವನ್ನು ಅವನು ಉಮೇಶ ಮತ್ತು ಯಾದವನಿಗೆ ವಿವರಿಸಿದಾಗ, ಉಮೇಶ ಅಸಮಾಧಾನದಿಂದ ಮುಗುಳ್ನಕ್ಕನು. ಉಮೇಶನ ಶ್ರಮದ ಅರ್ಜಿ ಸೀಟು ಇನ್ನು ಮಂಜೂರಾಗಬೇಕಾಗಿತ್ತು, ಆದರೆ ಅವನಿಗೆ ಆ ಅವಕಾಶವೂ ಇಲ್ಲದಂತೆ ತೋರಿತು. "ಒಬ್ಬನಿಗೆ ಪರಿಚಯವೇ ನೆಪೋಟಿಸಮ್‌ನ ಮೊದಲ ಹೆಜ್ಜೆ" ಎಂದು ಮನಸ್ಸಿನಲ್ಲಿಯೆ ಅರಿತು ಸುಮ್ಮನಾದನು.

ಅಷ್ಟರಲ್ಲಿ ಯಾದವನ ಸ್ಥಿತಿಯು ಇನ್ನೂ ಕಠಿಣವಾಗಿತ್ತು. ಪರೀಕ್ಷೆಗಾಗಿ ಆತನು ಬೆಳಗಿನ ಹೊತ್ತಿನಿಂದ ತಡರಾತ್ರಿ ತನಕ ಓದುತ್ತಿದ್ದರೂ, ಒಂದು ಸರ್ಕಾರಿ ಹುದ್ದೆಗೆ ಸಾವಿರ ಜನ ಸ್ಪರ್ಧಿಸುತ್ತಿದ್ದರು. ದರ್ಶಿತ್, ಪರಿಚಯದ ಪ್ರಭಾವದಿಂದ ಕೆಲಸ ಪಡೆದುಕೊಂಡ ಕಥೆಯನ್ನು ಕೇಳಿದ ಮೇಲೆ, ಯಾದವನಲ್ಲಿ ಒಂದು ಪ್ರಶ್ನೆ ಹುಟ್ಟಿತು: "ನಾನು ಶ್ರಮಿಸುತ್ತಿದ್ದೇನೆ, ಆದರೆ ನನ್ನ ಹಾದಿಯಲ್ಲಿ ಯಾರಾದರೂ ಪರಿಚಯದಿಂದ ಬಂದು ಬಾಗಿಲು ಮುಚ್ಚಿಬಿಟ್ಟರೆ?"

ಅಂತೆಯೇ, ಉಮೇಶ ತನ್ನ ಹಳೆ ಪರಿಚಯವನ್ನು ಬಳಸಲು ಪ್ರಯತ್ನಿಸುತ್ತಿದ್ದಾಗ, ಅವನಿಗೆ ಒಂದು ಸುವರ್ಣಾವಕಾಶ ಸಿಕ್ಕಿತು. ಆದರೆ, ಈ ಬಾರಿ ಅವನು ತನ್ನ ಸ್ನೇಹಿತರನ್ನು ನೆನೆಸಿಕೊಂಡನು. "ನೆಪೋಟಿಸಮ್ ಅನ್ನು ಉಪಯೋಗಿಸಿ ನಾನು ಯಶಸ್ವಿಯಾಗಲು ಪ್ರಯತ್ನಿಸಬಹುದೇ? ಅಥವಾ ನೈತಿಕತೆಯನ್ನು ಉಳಿಸಿಕೊಂಡು ಶ್ರಮದ ಪಥವನ್ನು ಆರಿಸಲೇ?" ಎಂಬಂತೆ ಅವನ ಮನಸ್ಸಿನಲ್ಲಿ ಗೊಂದಲ ಮೂಡಿತು.

ಕಾಲ ಕಳೆದಂತೆ, ದರ್ಶಿತ್, ಉಮೇಶ, ಮತ್ತು ಯಾದವ ತಮ್ಮ ಹಾದಿಯಲ್ಲಿ ತಮ್ಮದೇ ರೀತಿಯ ಜಯವನ್ನು ಕಂಡರು. ಆದರೆ, ದರ್ಶಿತ್ ತನ್ನ ಹಳೆಯ ಹುದ್ದೆಯಿಂದ ತೃಪ್ತಿಯಾಗದೆ, ಹೊಸ ಅವಕಾಶಗಳನ್ನು ಹುಡುಕುತ್ತಿದ್ದಾಗ, ಯಾದವ ತನ್ನ ಶ್ರಮದಿಂದ ಐಎಎಸ್ ಅಧಿಕಾರಿಯಾದನು. ಉಮೇಶ, ತನ್ನ ನೈತಿಕ ಚಟುವಟಿಕೆಗಳಿಂದ ತಮ್ಮ ಕಂಪನಿಯಲ್ಲಿ ಒಳ್ಳೆಯ ಸ್ಥಾನವನ್ನು ಪಡೆದನು. "ಒಂದು ನಿಮಿಷ ಯೋಚಿಸಿ ನೋಡಿ, ಜೀವನದ ದಾರಿಯಲ್ಲಿ ಏನು ಸಾಧಿಸುತ್ತೇವೆ ಎಂಬುದಕ್ಕಿಂತ ಅದು ಎಂತಹ ದಾರಿಗೆ ಹೊತ್ತೊಯ್ಯುತ್ತದೆ ಎಂಬುದೇ ಮುಖ್ಯ" ಎಂದು ಯಾದವನು ಸ್ನೇಹಿತರ ಮುಂದೆ ಅವನ ಅನಿಸಿಕೆಯನ್ನು ಹಂಚಿಕೊಂಡನು.

ತ್ರಿವೇಣಿಯಾಗಿ ಹರಿಯುವ ಈ ಸ್ನೇಹ, ಕಾಲಕ್ರಮೇಣ ಒಂದೊಂದು ದಿಕ್ಕಿನಲ್ಲಿ ತಿರುಗಿ ಕಥೆ ಒಂದೇ ಆದರೂ ಅದರ ಶಬ್ದ ವಿಭಿನ್ನವಾಗಿ ಬೆರೆಯಿತು.

ನಮ್ಮ ದೈನಂದಿನ ಜೀವನದಲ್ಲಿ ಗೊತ್ತಿಲ್ಲದೆ ನೆಪೋಟಿಸಮ್ ನಿಂದ ಲಾಭವನ್ನು ಪಡೆದುಕೊಂಡಿರುತ್ತೇವೆ. ದೇವಸ್ಥಾನದ ಪ್ರಸಾದದ ಅಥವಾ ದರ್ಶನದ ಸಾಲಿನಲ್ಲಿ, ಕೆಲಸ ಪಡೆದುಕೊಳ್ಳುವ ಅವಕಾಶಗಳಲ್ಲಿ, ಪರಿಚಯದ ಪ್ರಭಾವವನ್ನು ನಾವು ಎಲ್ಲೆಂದರಲ್ಲಿ ನೋಡುತ್ತೇವೆ. ಈ ಮೂವರ ಕಥೆಯು ನಮಗೆ ನೆಪೋಟಿಸಮ್ ನ ಪರಿಸ್ಥಿತಿಯನ್ನು ಕೇವಲ ಪ್ರಭಾವಿಗಳಲ್ಲಿ ಮಾತ್ರವಲ್ಲ, ಸಾಮಾನ್ಯರ ಜೀವನದಲ್ಲೂ ಸ್ಪಷ್ಟಗೊಳಿಸುತ್ತದೆ ಎಂದು ಕಥೆಯ ರೂಪದಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ.

ನೆಪೋಟಿಸಮ್ ಅನ್ನು ತೆಗೆದು ಹಾಕಲಾಗುವುದೊ ಇಲ್ಲವೋ ಅಥವಾ ಇದು ಎಲ್ಲಿಯ ವರೆಗೆ ಅನ್ವಯಿಸುತ್ತದೆ ಎಂಬುದು ನಮ್ಮೆಲ್ಲರ ವಿವೇಚನೆಗೆ ಬಿಟ್ಟಿದ್ದು.



**ಯಶಸ್ವಿ ಜೆ**
**ಜ್ಞಾನಭಾರತಿ,**
**ಬೆಂಗಳೂರು**




ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ(ರಿ), ಬೆಂಗಳೂರು
ಸರ್ವ ಸದಸ್ಯರ ಮಹಾಸಭೆ
34ನೇ ವಾರ್ಷಿಕೋತ್ಸವ
























ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ(ರಿ), ಬೆಂಗಳೂರು
ಸರ್ವ ಸದಸ್ಯರ ಮಹಾಸಭೆ
34ನೇ ವಾರ್ಷಿಕೋತ್ಸವ












ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ(ರಿ), ಬೆಂಗಳೂರು
ಸರ್ವ ಸದಸ್ಯರ ಮಹಾಸಭೆ
34ನೇ ವಾರ್ಷಿಕೋತ್ಸವ

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.

- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.

- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.

- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**
**ವಾಟ್ಸಪ್ ನಂ. 9845660131**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**